**ಚಾಸಾಃ 2 ಪ್ರಾಸಾಃ 2**

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 2348/2023

| | | |
|---|---|---|
| ಹೆಸರು | : | ಫಾತಿಮಾ |
| ಗಂಡನ ಹೆಸರು | : | ಅಮೀರ್ ಸಾಹೇಬ್ |
| ಪ್ರಾಯ | : | 64 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಕಿಲ್ಲೂರು, ಬೆಳ್ತಂಗಡಿ ತಾಲೂಕು |

**ದಿನಾಂಕ 27.01.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಹೀಗೆ ಸುಮಾರು 2 ವರ್ಷಗಳ ಹಿಂದೆ ನಾನು ನನ್ನ ಮಗನ ಮನೆಗೆ ಕಿಲ್ಲೂರಿನಿಂದ ದುರ್ಗಾ ಬಸ್ಸಿನಲ್ಲಿ ಬರುತ್ತಿದ್ದೆ. 5 ಗಂಟೆಗೆ ಪಡಂಬಿಲ ಎಂಬಲ್ಲಿಗೆ ಬಂದಾಗ ಬಸ್ಸು ಹೋಗಿ ಡಿಕ್ಕಿ ಹೊಡೆದಿದ್ದು, ನಂತರದಲ್ಲಿ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಇದರಿಂದ ನನ್ನ ಬೆನ್ನಿಗೆ ಮತ್ತು ಸೊಂಟಕ್ಕೆ ಪೆಟ್ಟಾಗಿರುತ್ತದೆ. ಆ ಸಮಯದಲ್ಲಿ ಬಸ್ಸಿನಲ್ಲಿದ್ದ ಒಬ್ಬರು ಮರಣಹೊಂದಿರುತ್ತಾರೆ. ಅಪಘಾತಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ಆ ದಿನ ಬಸ್ಸನ್ನು ಚಾಲನೆ ಮಾಡುತ್ತಿದ್ದ ಬಸ್ಸಿನ ಚಾಲಕನನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರಯಾಣ ಮಾಡುತ್ತಿದ್ದ ಬಸ್ಸನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ2 ರಿಂದ 5 ರಲ್ಲಿರುವ ಬಸ್ಸನ್ನು ನೋಡಿ ಗುರುತಿಸಿರುತ್ತಾರೆ. ಈ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಬಸ್ಸು ಇಂದಬೆಟ್ಟುವಿನಿಂದ ಪಡಂಬಿಲ ಎಂಬಲ್ಲಿಗೆ ಬಂದಾಗ ಚಾಲಕ ಬಸ್ಸನ್ನು ಅತಿವೇಗ ಮತ್ತು ದುಡುಕುತನದಿಂದ ಚಲಾಯಿಸಿದ ಕಾರಣ ಅಪಘಾತವಾಗಿದೆ ಎಂದರೆ ಗೊತ್ತಿಲ್ಲ. ದುಡುಕುತನದಿಂದ ಬಸ್ಸನ್ನು ಚಲಾಯಿಸಿದ ಪರಿಣಾಮ ಬಸ್ಸಿನ ನಿಯಂತ್ರಣ ಕಳೆದುಕೊಂಡಿದ್ದಾರೆ ಎಂದರೆ ಸರಿ. ನಂತರ ಬಸ್ಸು ರಸ್ತೆಯ ಬಲಬದಿಯಲ್ಲಿರುವ ಗುಡ್ಡಕ್ಕೆ ಹೋಗಿ ಡಿಕ್ಕಿ ಹೊಡೆದಿದೆ ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಬಸ್ಸಿನಲ್ಲಿದ್ದ ಸುಂದರಿ ಎಂಬುವವರು ಬಸ್ಸಿನ ಅಡ್ಡ ಸೀಟಿನಲ್ಲಿ ಕುಳಿತ್ತಿದ್ದರು ಎಂದರೆ ಸರಿಯಲ್ಲ, ಹಿಂಬದಿಯಲ್ಲಿ ಕುಳಿತ್ತಿದ್ದರು. ಡಿಕ್ಕಿ ಹೊಡೆದಾಗ ಆಕೆಯ ಎದೆಗೆ ಮುಂಬದಿಯಲ್ಲಿದ್ದ ರಾಡು ತಾಗಿದ ಕಾರಣ ಮೃತಪಟ್ಟಿರುತ್ತಾರೆ ಎಂದರೆ ಇರಬಹುದು. ಆಕೆ ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ, ಬಸ್ಸಿನಲ್ಲಿ ಮೃತಪಟ್ಟಿರುತ್ತಾರೆ. ಚಾಲಕನ ಹೆಸರು ನಿತಿನ್ ಎಂದು ಗೊತ್ತಾಯಿತು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ. ಎಸ್.ಎಲ್.ಎ ವಕೀಲರಿಂದಃ

ಚಾಲಕನ ಹೆಸರು ನಿತಿನ್ ಎಂದು ಜನರು ಹೇಳಿದ ನಂತರ ಗೊತ್ತಾಗಿರುತ್ತದೆ. ನಾನು ಚಾಲಕನ ಹಿಂಬದಿಯಲ್ಲಿ ಇಬ್ಬರು ಕುಳಿತುಕೊಳ್ಳಲು ಜಾಗದಲ್ಲಿ ಕುಳಿತ್ತಿದ್ದೆ. ಈ ಬಸ್ಸಿನಲ್ಲಿ ನಾನು ಹಲವು ಬಾರಿ ಪ್ರಯಾಣ ಮಾಡಿದ್ದೇನೆ. ರೋಡು ಎಷ್ಟು ಅಗಲ ಇತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ರಸ್ತೆ ಸರಿಯಾಗಿತ್ತು, ಆದರೆ ಎಷ್ಟು ಅಗಲ ಇತ್ತು ಎಂದ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆ ಸಮಯದಲ್ಲಿ ಬೇರೆ ವಾಹನ ಹೋಗುತ್ತಾ ಬರುತ್ತಾ ಇತ್ತಾ ಎಂದರೆ ಇಲ್ಲ. ಆ ಸೀಟಿನಲ್ಲಿ ನಾನು ಒಬ್ಬಳೇ ಕುಳಿತ್ತಿದ್ದೆ. ಬಸ್ಸಿಗೆ ಎಲ್ಲೆಲ್ಲಿ ಜಖಂ ಆಗಿದೆ ಎಂದರೆ ಸಾಕ್ಷಿ ಎದುರಿನ ಗ್ಲಾಸು ಹುಡಿಯಾಗಿರುವುದನ್ನು ಹೊರತುಪಡಿಸಿ ಬೇರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಗುದ್ದಿದ ಬಸ್ಸು ತಾಗಿ ಅಲ್ಲೆ ನಿಂತಿತ್ತು. ಗುದ್ದಿದ ಬಸ್ಸು ಟಾರ್ ರಸ್ತೆಯಲ್ಲಿತ್ತಾ ಎಂದರೆ ಸಾಕ್ಷಿ ಇರಲಿಲ್ಲ ಆದರೆ ಎಲ್ಲಿತ್ತು ಎಂದು ನನಗೆ ಏನು ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ಯಾವ ಕಾರಣದಿಂದ ಬಸ್ಸು ಹೋಗಿ ಡಿಕ್ಕಿ ಹೊಡೆದಿದೆ ಎಂದು ಹೇಳಲು

ಆಗುವುದಿಲ್ಲ. ಅದೇ ದಿನ ರಾತ್ರಿ 9 ಗಂಟೆಗೆ ನಾನು ಬೆನಕ ಆಸ್ಪತ್ರೆಯಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಯಾವ ಕಾರಣದಿಂದ ಈ ಅಪಘಾತವಾಗಿದೆ ಎಂದು ಪೊಲೀಸರ ಮುಂದೆ ಹೇಳಿರುವುದಿಲ್ಲ. ನಾನು ಯಾವ ಕಾರಣ ಎಂದು ಗೊತ್ತಿಲ್ಲ ಎಂದು ಹೇಳಿದ್ದೆ. ನಾನು ಬಸ್ಸಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)